# ವಿಶ್ವನಂದಿನಿ ಪ್ರಶ್ನೋತ್ತರಮಾಲೆ – 125

## ಕೇದಾರನಾಥಕ್ಕೆ ಮಾಧ್ವರು ಏಕೆ ಹೋಗಬಾರದು

ಶ್ರೀ ಗುರುಭ್ಯೋ ನಮಃ, ಆಚಾರ್ಯರೇ, ವಿನಮ್ರ ಪೂರ್ವಕ ನಮಸ್ಕಾರಗಳು. ಮಾಧ್ವರು ಕೇದಾರನಾಥ ಮತ್ತು ನೇಪಾಳದ ಪಶುಪತಿನಾಥಕ್ಕೆ ಹೋಗಬಾರದೆಂದು ಹಿರಿಯರು ಹೇಳುವದನ್ನು ಕೇಳಿದ್ದೇವೆ. ಇದು ಸತ್ಯವಾ? ಸತ್ಯವಾಗಿದ್ದಲ್ಲಿ ಕಾರಣ ತಿಳಿಸಿ.

**— ಭಾರ್ಗವ ರಾವ್, ಬೆಂಗಳೂರು.**

ಆಚಾರ್ಯರಿಗೆ ಸಾಷ್ಟಾಂಗ ಪ್ರಣಿಪಾತಗಳು.

ನಾವು ಮಾಧ್ವರು ಯಾವ ಕಾರಣಕ್ಕಾಗಿ ಕೇದಾರ ನಾಥ ದರ್ಶನ ಮಾಡಬಾರದು, ತಿಳಿಸಿ.

**— ಪವನ್ ಸತ್ಯೇಂದ್ರ**

## ಉತ್ತರ

ಮಾಧ್ವರು ಅವಶ್ಯವಾಗಿ ನೇಪಾಳದ ಪಶುಪತಿನಾಥನನ್ನು ದರ್ಶನ ಮಾಡಿ ಬರಬಹುದು. ಯಾವುದೇ ಸಂಶಯವಿಲ್ಲ.

ಆದರೆ ಕೇದಾರನಾಥಕ್ಕೆ ಹೋಗುವ ಸಂಪ್ರದಾಯವಿಲ್ಲ. ಕಾರಣ ರುದ್ರದೇವರ ಆಜ್ಞೆ.

ಶ್ರೀಮದಾಚಾರ್ಯರು ಮಹಾಭಾರತತಾತ್ಪರ್ಯನಿರ್ಣಯದಲ್ಲಿ ತಿಳಿಸಿದ್ದಾರೆ —

**ತತಃ ಪರಂ ವೇದವಿದಾಮಗಮ್ಯತಾಶಾಪಂ ಪ್ರಾದಾತ್ ಶಂಕರೋ ವ್ರೀಳಿತೋಽತ್ರ**

“ಶ್ರೀಹರಿ ಸರ್ವೋತ್ತಮನೇ ಅಥವಾ ರುದ್ರದೇವರು ಸರ್ವೋತ್ತಮನೇ” ಎಂಬ ವಿಷಯದಲ್ಲಿ ಭೀಮಸೇನದೇವರಿಗೂ ಮತ್ತು ಬ್ರಾಹ್ಮಣನ ರೂಪದಲ್ಲಿ ಬಂದಿದ್ದ ರುದ್ರದೇವರಿಗೂ ವಾದ ಆರಂಭವಾಗುತ್ತದೆ. ಸಕಲ ವೈದಿಕಪ್ರಮಾಣಗಳ ಆಧಾರದೊಂದಿಗೆ ಭೀಮಸೇನದೇವರು

ಶ್ರೀಹರಿಯೇ ಸರ್ವೋತ್ತಮ ಎಂದು ಪ್ರತಿಪಾದನೆ ಮಾಡುತ್ತಾರೆ.
ರುದ್ರದೇವರನ್ನು ಸರ್ವೋತ್ತಮ ಎಂದು ಹೇಳುವ ಯಾವ ಪಾಶುಪತ ಆಗಮವನ್ನು ರಚಿಸಿರುವದೇ ರುದ್ರದೇವರು. (ದೇವರ ಆಜ್ಞೆಯಂತೆ, ಅಸುರರನ್ನು ಮೋಹಿಸಲು) ಆದರೆ, ಅಂತಹ ತಮ್ಮ ಮುಂದೆಯೇ ಪಾಶುಪತ ಆಗಮದ ಖಂಡನೆಯಾದದ್ದನ್ನು ಕಂಡು ರುದ್ರದೇವರು ನಾಚಿಕೆಗೆ ಒಳಗಾಗುತ್ತಾರೆ. ಆ ನಂತರ, ವೇದಗಳನ್ನು ಅಧ್ಯಯನ ಮಾಡಿದ, ವಿಷ್ಣುವಿನ ಸರ್ವೋತ್ತಮತ್ವವನ್ನು ತಿಳಿದ ಯಾರೂ ನನ್ನ ಈ ಕ್ಷೇತ್ರಕ್ಕೆ ಬರುವದು ಬೇಡ ಎಂದು ಶಾಪ ನೀಡುತ್ತಾರೆ.

ಪರಮವೈಷ್ಣವೋತ್ತಮರಾದ ಶ್ರೀ ರುದ್ರದೇವರ ಶಾಪವನ್ನು ಆಜ್ಞೆಯ ರೂಪದಲ್ಲಿ ಸ್ವೀಕರಿಸಿರುವ ಮಾಧ್ವರು ಕೇದಾರಕ್ಷೇತ್ರಕ್ಕೆ ಹೋಗುವದಿಲ್ಲ.

ಹಾಗಾದರೆ ಕೇದಾರಕ್ಷೇತ್ರವನ್ನು ಸ್ಮರಣೆ ಮಾಡಬಾರದೆ ಎಂಬ ಪ್ರಶ್ನೆಗೆ ಶ್ರೀಮಚ್ಚಂದ್ರಿಕಾಚಾರ್ಯರು,

ಶ್ರೀಪಾದರಾಜಪಂಚರತ್ನಮಾಲಿಕಾ ಸ್ತೋತ್ರದಲ್ಲಿ ಸ್ವಯಂ ತಾವು ಸ್ಮರಣೆ ಮಾಡಿ ನಮಗೆ ಉತ್ತರ ನೀಡಿದ್ದಾರೆ.

**ಕಾಶೀ-ಕೇದಾರ-ಮಾಯಾ-ಕರಿಗಿರಿ-ಮಧುರಾ-ದ್ವಾರಕಾ-ವೇಂಕಟಾದ್ರಿ-ಶ್ರೀಮುಷ್ಣ-ಕ್ಷೇತ್ರ-ಪೂರ್ವ-ತ್ರಿಭುವನ-ವಿಲಸತ್ಪುಣ್ಯಭೂಮೀನಿವಾಸಃ**

ಎಂದು.

ಕೇದಾರ ಕ್ಷೇತ್ರ ಅತ್ಯಂತ ಪವಿತ್ರತಮವಾದ ಕ್ಷೇತ್ರ ಸಂಶಯವಿಲ್ಲ. ಪ್ರತೀನಿತ್ಯ ಬೆಳಿಗ್ಗೆ ಎಂದು ಆ ಕೇದಾರಕ್ಷೇತ್ರವನ್ನು ಕೇದಾರದ ಒಡೆಯರಾದ ರುದ್ರದೇವರನ್ನು ಸ್ಮರಿಸಬೇಕು. ಅವರ ಆಜ್ಞಾನುಸಾರಾವಾಗಿ ಅಲ್ಲಿಗೆ ಹೋಗುವಂತಿಲ್ಲ, ಅಷ್ಟೆ.

ಹಾಗಾದರೆ, ಕೇದಾರಕ್ಕೆ ಹೋಗುವದರಿಂದ ಏನು ಮಹತ್ತರ ಪುಣ್ಯ ಒದಗಿಬರುತ್ತದೆ, ಅದರಿಂದ ವಂಚಿತರಾದಂತಾಯಿತಲ್ಲ ಎಂಬ ಪ್ರಶ್ನೆಗೂ ಚಂದ್ರಿಕಾಚಾರ್ಯರು ಮೇಲಿನ ಮಾತಿನಲ್ಲಿಯೇ ಉತ್ತರ ನೀಡಿದ್ದಾರೆ.

ಶ್ರೀ ಶ್ರೀಪಾದರಾಜ ಗುರುಸಾರ್ವಭೌಮರ ವೃಂದಾವನದಲ್ಲಿಯೇ ಕೇದಾರಕ್ಷೇತ್ರ ಅಭಿಮಾನಿ ದೇವತೆಯ, ಕೇದಾರದ ನಾಥರಾದ ಪಾರ್ವತೀಪತಿಯ ಸನ್ನಿಧಾನವಿದೆ.

ಕೇದಾರಕ್ಷೇತ್ರವನ್ನು ಸ್ಮರಣೆ ಮಾಡುತ್ತ ಶ್ರೀ ಶ್ರೀಪಾದರಾಜಗುರುಸಾರ್ವಭೌಮರ ವೃಂದಾವನಕ್ಕೆ ಪ್ರದಕ್ಷಿಣೆ ಬರುವದರಿಂದ ಕೇದಾರದ ಯಾತ್ರೆಯ ಪುಣ್ಯವೂ ಲಭಿಸುತ್ತದೆ. ರುದ್ರದೇವರ ಅನುಗ್ರಹವೂ ಲಭಿಸುತ್ತದೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**
No. 2, “Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India
nagendracharya@yahoo.co.in
WhatsApp: 9901 551 491